# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-172 ಮಡಿವಾಳ ಕಛೇರಿಯಲ್ಲಿ ದಿನಾಂಕ: 17.10.2020 ರಂದು ನಡೆದ ವಾರ್ಡ್ ಸಮಿತಿ ಸಭೆ ನಡವಳಿಗಳು.

ಹಾಜರಿದ್ದ ಅಧಿಕಾರಿಗಳ ವಿವರಗಳು

1. ಶ್ರೀ. ಗಂಗಾಧರ್, ವಾರ್ಡ್-172 ನೋಡಲ್ ಅಧಿಕಾರಿ.
2. ಶ್ರೀ ಸಿದ್ಧಣ್ಣ.ವಿ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕಅಭಿಯಂತರರು ವಾರ್ಡ್-172 ಮಡಿವಾಳ
3. ಶ್ರೀ.ಮೊಹಮ್ಮದ್ ಹೈದರ್ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ 172
4. ಶ್ರೀ. ಮೌನೇಶ್ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ 172
5. ಶ್ರೀ. ಹರೀಶ್, ಎ.ಇ.(ಬಿಡಬ್ಲ್ಯೂ.ಎಸ್.ಎಸ್.ಬಿ)
6. ಶ್ರೀ.ಗಂಗಣ್ಣ, ಮನ್ನೂರಮ್ಮ ಕಾಲೋನಿ, ಸದಸ್ಯರು
7. ಶ್ರೀ. ಶ್ರೀನಿವಾಸ್‌ರೆಡ್ಡಿ, ವೆಂಕಟೇಶ್ವರ ಲೇಔಟ್, ಸದಸ್ಯರು
8. ಶ್ರೀ ಮಂಜುನಾಥ್, ಕ್ಯಾಷಿಯರ್ ಲೇಔಟ್ ಅಸೋಸಿಯೇಷನ್

* * * * * *

ದಿನಾಂಕ-16-10-2020ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಾಗಿರುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಕಳೆದ ವಾರ್ಡ್ ಸಮಿತಿ ಸಭೆಯ ವರದಿಯನ್ನು ಚಚಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನಿಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

1. ರಸ್ತೆ ಗುಂಡಿಗಳು.

ಕಳೆದ ಸಭೆಯಲ್ಲಿ ಚರ್ಚಿಸಲಾಗಿದ್ದ, ವಾರ್ಡ್ ಪರೀವಿಕ್ಷಣೆಯ ಸಮಯದಲ್ಲಿ ಮೇಲೆ ಪರಿವೀಕ್ಷೀಸಿದ ರಸ್ತೆಗಳಲ್ಲಿ ಅಲ್ಲಲ್ಲಿ ಗುಂಡಿಗಳು ಕಂಡುಬಂದಿರುತ್ತದೆ. ಸದರಿ ಗುಂಡಿಗಳನ್ನು ತ್ವರಿತಗತಿಯಲ್ಲಿ ಮುಚ್ಚಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕಾಗಿ ಹಾಜರಿದ್ದ ವಾರ್ಡ್‌ನ ಸಹಾಯಕ ಅಭಯಯಂತರರಿಗೆ ಸೂಚಿಸಲಾಗಿತ್ತು.

ಈ ಕುರಿತಂತೆ ಸಹಾಯಕ ಅಭಿಯಂತರರು ಮಾತನಾಡಿ ರಸ್ತೆಅಗೆತದ ಎಲ್ಲಾಗುಂಡಿಗಳು ಹಾಗೂ ಬಿಡಬ್ಲ್ಯೂ.ಎಸ್.ಎಸ್.ಬಿ/ ಇತರೆ ಇಲಾಖೆಯಿಂದು ಕೈಗೊಂಡ ಎಲ್ಲಾ ಗುಂಡಿ ಮತ್ತು ರಸ್ತೆ ಅಗೆತಗಳನ್ನು ಮುಚ್ಚಲು ಅಗತ್ಯ ಕ್ರಮ ಕೈಗೊಳ್ಳಗಿದೆ

ಬಿಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಸಹಾಯಕ ಅಭಿಯಂತರರಾದ ಶ್ರೀ ಹರಿಶ್‌ರವರು ಮಾತನಾಡಿ ನಮ್ಮ ಇಲಾಖೆವತಿಯಿಂದ ಕೈಗೊಳ್ಳಲಾದ ಎಲ್ಲಾ ರಸ್ತೆ ಅಗೆತಗಳನ್ನು ಮರು ನಿರ್ಮಾಣಮಾಡಲಾಗಿರುತ್ತದ.

2. ಅನಧೀಕೃತ ಕಟ್ಟಡಗಳು.

ವಾರ್ಡ್‌ನ ಪರಿವೀಕ್ಷಣೆಯ ರಸ್ತೆಗಳಲ್ಲಿ ಹಲವಾರು ಕಟ್ಟಡಗಳು ನಿರ್ಮಾಣವಾಗುತ್ತಿದ್ದು ಸದರಿ ಕಟ್ಟಡಗಳ ಮಂಜೂರಾಗಿ ನಕ್ಷೆಗಳನ್ನು ಪರಿಶೀಲಿಸಲು ಮತ್ತು ಅನಧೀಕೃತ ಕಟ್ಟಡಗಳ ವಿರುದ್ದು ಕಟ್ಟುನಿಟ್ಟಿನ ಕ್ರಮಗಳನ್ನು ಕೆ.ಎಂ.ಸಿ ಕಾಯ್ದೆ ಅನ್ವಯ ನೋಟೀಸ್‌ಗಲನ್ನು ಜಾರಿಗೊಳಿಸಲಾಗಿದೆ.

3. **ಬೃಹತ್ ನೀರು ಗಾಲುವೆಯ ಹೂಳು ತೆಗೆಯುವ ಬಗ್ಗೆ**

ಕಳೆದ ಸಭೆಯಲ್ಲಿ ಶ್ರೀ ಗಂಗಣ್ಣರವರು ಮಾತನಾಡಿ ಮದ್ದೂರಮ್ಮ ಕಾಲೋನಿಯಲ್ಲಿ ಹರೆಯುವ ಬೃಹತ್ ನೀರುಗಾಲುವೆಯು ಹೂಳು ಹಾಗೂ ಇತರೆ ಅವಶೇಷಗಳಿಂದ ತುಂಬಿದ್ದು, ಮಳೆಗಾಲವಿರುವುದರಿಂದ ಅತೀ ಜರೂರಾಗಿ ಹೂಳನ್ನು ತೆಗೆಯಲು ಮನವಿಮಾಡಿರುತ್ತಾರೆ.

ಈ ಸಂಬಂಧ ವಾರ್ಡ್ ಅಭಿಯಂತರರರು ಸಂಬಂಧ ಪಟ್ಟ ಇಲಾಖೆಯಿಂದ ಅಗತ್ಯ ಕ್ರಮಗಳು ಕೈಗೊಳ್ಳಲಾಗಿದೆ.

4. ಬಿದಿ ದೀಪಗಳ ನಿರ್ವಹಣೆ ಬಗ್ಗೆ.

ಕಳೆದ ಸಭೆಯಲ್ಲಿ ಚರ್ಚಿಸಲಾಗಿದ್ದ ಆಕ್ಸಾ ಬಿಲ್ಡಿಂಗ ಹಿಂಭಾಗ, ಕ್ಯಾಶೀಯರ್ ಬಡಾವಣೆಯಲ್ಲಿ ಬೀದಿ ದೀಪಗಳ ಸಮಸ್ಯೆ ಇದ್ದು, ಸದರಿ ಸಮಸ್ಯೆಗಳ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಹಾಜರಿದ್ದ ನಾಗರೀಕರು ಮನವಿಮಾಡಿರುತ್ತಾರೆ.

ಈ ಸಂಬಂಧ ವಾರ್ಡ್ ಅಭಿಯಂತರರರು ಸಂಬಂಧ ಪಟ್ಟ ಇಲಾಖೆಯಿಂದ ಅಗತ್ಯ ಕ್ರಮಗಳು ಕೈಗೊಳ್ಳಲಾಗಿದೆ.

ಈ ಸಭೆಯಲ್ಲಿ ವಾರ್ಡ್ ವ್ಯಾಪ್ತಿಯ 17ನೇ ಮುಖ್ಯರಸ್ತೆ ಮತ್ತು 3ನೇ ಅಡ್ಡರಸ್ತೆ ಕ್ಯಾಶೀಯರ್ ಬಡಾವಣೆಯ ರಸ್ತೆಗಳಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿರುವುದಿಲ್ಲ ಹಾಗೂ ಸಮರ್ಪಕವಾಗಿ ನಿರ್ವಹಣೆಯಾಗುತ್ತಿಲ್ಲವೆಂದು ಕೂಡಲೇ ಅಗತ್ಯ ಕ್ರಮ ಕೈಗೊಳ್ಳಲು ಅಲ್ಲಿನ ನಾಗರೀಕರು ದೂರಿರುತ್ತಾರೆ.

ಈ ಸಬಂಧ ಸಭೆಯ ಅಧ್ಯಕ್ಷರು ಮಾತನಾಡಿ ಸಂಬಂಧ ಪಟ್ಟ ಇಲಾಖೆಯಿಂದ ಅಗತ್ಯಕ್ರಮ ಜರುಗಿಸಲು ವಾರ್ಡ್ ಅಭಿಯಂತರರಿಗೆ ಸೂಚಿಸಲಾಯಿತು.

5. ಘನತ್ಯಾಜ್ಯ ನಿರ್ವಹಣೆ ಬಗ್ಗೆ.

ಕಳೆದ ಸಮಿತಿ ಸಭೆಯಲ್ಲಿ ಚರ್ಚಿಲಾಗಿದ್ದ, ವಾರ್ಡ್ ವ್ಯಾಪ್ತಿಯಲ್ಲಿ ಒಣ ಕಸ ಹಾಗೂ ಹಸಿಕಸವನ್ನು ಸಮರ್ಪಕವಾಗಿ ವ್ಯವಸ್ಥಿತ ಪದ್ಧತಿಯನ್ನು ಅಳವಡಿಸಿ ಕಸಮುಕ್ತ ವಾರ್ಡ್‌ನ್ನು ನಿರ್ಮಾಣ ಮಾಡುವ ಸಲುವಾಗಿ ಸೂಕ್ತಕ್ರಮಗಳನ್ನು ಕೈಗೊಳ್ಳಲು ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚನೆಯನ್ನು ನೀಡಲಾಗಿತ್ತು.

ಈ ಸಂಬಂಧ ಕಿರಿಯ ಆರೋಗ್ಯ ಪರಿವೀಕ್ಷಕರಿಂದ ಅಗತ್ಯ ಕ್ರಮಗಳು ಕೈಗೊಳ್ಳಲಾಗಿದೆ.

ಈ ಸಭೆಯಲ್ಲಿ ಅದ್ಯಕ್ಷರು ಮಾತನಾಡಿ ವಾರ್ಡ್ ವ್ಯಾಪ್ತಿಯ ವೆಂಕಟೇಶ್ವರ ಬಡಾವಣೆಯ ಉದ್ಯಾನವದ ಸುತ್ತ ಮುತ್ತ ಕಸವನ್ನು ಬಿದ್ದಿದ್ದು ಸಮರ್ಪಕವಾಗಿ ವಿಲೇವಾರಿಯಾಗುತ್ತಿರುವುದಿಲ್ಲ ಮತ್ತು ವಾರ್ಡ್‌ನ ಅನೇಕ ಮುಖ್ಯ ಹಾಗೂ ಇತರೆ ರಸ್ತೆಗಳಲ್ಲಿ ಸಮರ್ಪಕವಾ ಕಸವಿಲೇವಾರಿಯಾಗುತ್ತಿರುವುದಿಲ್ಲ ಹಾಗೂ ಈಗ ನಾಡ ಹಬ್ಬ ದಸರಾ ಇರುವುದರಿಂದ ಅನೇಕ ಕಡೆ ತ್ಯಾಜ್ಯ ಹಾಗೂ ಅನುಪಯುಕ್ತ ಅವಶೇಷಗಳು ಹೆಚ್ಚಾಗಿ ಉತ್ಪತ್ತಿಯಾಗಿ ಅಲ್ಲಲ್ಲಿ ಎಸೆಯುವುದರ ಬಗ್ಗೆ ಮುಂಜಾಗ್ರತೆ ಕೈಗೊಂಡು ತ್ವರಿತಗತಿಯಲ್ಲಿ ಕಸವನ್ನು ವಿಲೇವಾರಿ ಮಾಡಲು ಸಭೆಗೆ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷರಿಗೆ ಅಗತ್ಯ ಕ್ರಮಗಳು ಕೈಗೊಳ್ಳಲು ಸೂಚಿಸಲಾಯಿತು

ಕೊನೆದಾಗಿ ಸಭೆಯ ಅಧ್ಯಕ್ಷರು ಮಾತನಾಡಿ ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು

(ಶ್ರೀ. ಗಂಗಾಧರ್)
ಕಾರ್ಯದರ್ಶಿ ಮತ್ತು ನೋಡಾಲ್ ಅಧಿಕಾರಿ
ವಾರ್ಡ್–172 ಮಡಿವಾಳ

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ–ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ